# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಶಿಕ್ಷಣ ಸ್ಥಾಯಿ ಸಮಿತಿಯು ದಿನಾಂಕ: 28.02.2013ರಂದು ನಡೆದ ಸಭೆಯ ನಡವಳಿ.

| ಕ್ರ. ಸ | ಹಾಜರಿದ್ದ ಮಾನ್ಯ ಅಧ್ಯಕ್ಷರು ಹಾಗೂ ಮಾನ್ಯ ಸದಸ್ಯರು | ಪದನಾಮ | ಕ್ರ. ಸ | ಹಾಜರಿದ್ದ ಅಧಿಕಾರಿಗಳ ಹೆಸರು | ಪದನಾಮ |
|---|---|---|---|---|---|
| 1 | ಶ್ರೀ.ಬಿ.ಗೋವಿಂದರಾಜು | ಅಧ್ಯಕ್ಷರು | 1 | ಶ್ರೀ.ಬಿ.ಇ.ಗೋವಿಂದರಾಜು | ಕೌನ್ಸಿಲ್ ಕಾರ್ಯದರ್ಶಿ |
| 2 | ಶ್ರೀ.ಅಶ್ವಥ್ ನಾರಾಯಣ ಗೌಡ | ಸದಸ್ಯರು | 2 | ಶ್ರೀ.ಹನುಮಂತರಾಜು | ಶಿಕ್ಷಣಾಧಿಕಾರಿ |
| 3 | ಶ್ರೀ.ಎನ್.ಎಂ.ಕೃಷ್ಣ ಮೂರ್ತಿ | ಸದಸ್ಯರು | 3 | ಶ್ರೀ.ವಿ.ವೆಂಕಟಕೃಷ್ಣಯ್ಯ | ದೈಹಿಕ ಶಿಕ್ಷಣಾಧಿಕಾರಿ |
| 4 | ಶ್ರೀಮತಿ.ಎನ್.ಜಿ.ಜಯರತ್ನ | ಸದಸ್ಯರು | 4 | ಶ್ರೀ.ಡಿ.ಪಿ.ಮಹೇಂದ್ರ ಸ್ವಾಮಿ | ಆಟದ ಮೈದಾನದ ಮೇಲ್ವಿಚಾರಕರು |
| 5 | ಶ್ರೀಮತಿ.ವಸಂತಕುಮಾರಿ | ಸದಸ್ಯರು | | | |
| 6 | ಶ್ರೀ.ಎಂ.ಉದಯಶಂಕರ್ | ಸದಸ್ಯರು | | | |
| 7 | ಶ್ರೀ.ಎನ್.ಎಂ.ಹನುಮಂತೇಗೌಡ | ಸದಸ್ಯರು | | | |

ಸಭೆಯು ಬೆಳ್ಳಿಗೆ 11.00 ಘಂಟೆಗೆ ಪ್ರಾರಂಭವಾಗಿದ್ದು, ಸಭೆಗೆ ಹಾಜರಿದ್ದ ಮಾನ್ಯ ಸದಸ್ಯರುಗಳನ್ನು ಹಾಗೂ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸುತ್ತಾ, ಹಿಂದಿನ ಸಭೆಯ ನಡೆವಳಿಕೆಗಳನ್ನು ಓದಿ ದಾಖಲು ಮಾಡಲಾಯ್ತು. ಕಾರ್ಯ ಕ್ರಮದಪಟ್ಟಿಯಲ್ಲಿರುವ, ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಲು ಎಲ್ಲಾ ಸದಸ್ಯರ ಸಹಕಾರವನ್ನು ಕೋರಲಾಯ್ತು.

**ವಿಷಯ ಸಂಖ್ಯೆ:ಶಿ.ಸ್ಥಾ.ಸ/20/12-13**

**ವಿಷಯ: 2011-12ನೇ ಸಾಲಿನ ಮಾನ್ಯ ಉಪಮಹಾಪೌರರ ವಿವೇಚನಾ ಅಧೀನಕ್ಕೆ ಒಳಪಟ್ಟ "ಮರಳಿ ಬಾ ಆಟದ ಮೈದಾನಕ್ಕೆ" ಅನುದಾನದಡಿಯಲ್ಲಿ ಅನುಮೋದನೆಯಾದ ವಾರ್ಡ್ ನಂ: 8 ರಲ್ಲಿ ಸಹಕಾರನಗರದ ಆಟದ ಮೈದಾನವನ್ನು ಅಭಿವೃದ್ಧಿಪಡಿಸುವ ಬಗ್ಗೆ.**

ವಿಶೇಷ ಆಯುಕ್ತರು(ಯೋಜನೆ)ರವರ ಟಿಪ್ಪಣಿ ಸಂಖ್ಯೆ:ಬಿಬಿಎಂಪಿ:ಜಂ.ಆ(ಯವ)ಪಿಆರ್/6608/12-13, ದಿನಾಂಕ: 06.02.2013ರಂದು ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ಯಲಹಂಕ ವಲಯದ ವಾರ್ಡ್ ಸಂಖ್ಯೆ: 8 ರ ಕೋಡಿಗೇಹಳ್ಳಿ ವ್ಯಾಪ್ತಿಯಲ್ಲಿ ಬರುವ ಸಹಕಾರನಗರದಲ್ಲಿರುವ ಮಕ್ಕಳ ಆಟದ ಮೈದಾನವು ಗಿಡಪೊದೆಗಳಿಂದ ತುಂಬಿಕೊಂಡು ಸಾರ್ವಜನಿಕರ ಮತ್ತು ಮಕ್ಕಳ ಉಪಯೋಗಕ್ಕೆ ಬಾರದೇ ಇರುವುದರಿಂದ ಹಾಗೂ ಸದರಿ ಪ್ರದೇಶದಲ್ಲಿ ಸುಮಾರು 3-4 ಶಾಲೆಗಳಿದ್ದು, ಶಾಲಾ ಮಕ್ಕಳು ಈ ಆಟದ ಮೈದಾನವನ್ನು ಅವಲಂಬಿಸಿರುವುದನ್ನು ಮನಗಂಡು, ಸದರಿ ಆಟದ ಮೈದಾನವನ್ನು ಅಭಿವೃದ್ಧಿಪಡಿಸಲು ಅಂದಾಜು ಮೊತ್ತ ರೂ.25.00ಲಕ್ಷಗಳು ಅಂದಾಜಿಸಿದ್ದು, ಈ ಮೊತ್ತಕ್ಕೆ ಮಾನ್ಯ ಉಪಮಹಾಪೌರರ ವಿವೇಚನಾ ಅಧೀನಕ್ಕೆ ಒಳಪಟ್ಟ **"ಮರಳಿ ಬಾ ಆಟದ ಮೈದಾನಕ್ಕೆ"** ಅನುದಾನದಡಿಯಲ್ಲಿ ಅನುಮೋದನೆಯಾಗಿರುತ್ತದೆ.

ಸದರಿ ಕಾಮಗಾರಿ ಸಂಕೇತ 008-12-000078 ಇದ್ದು, ಸದರಿ ಕಾಮಗಾರಿಯನ್ನು ಮೆ: ಕೆ.ಆರ್.ಐ.ಡಿ.ಎಲ್ ಸಂಸ್ಥೆಗೆ ವಹಿಸಲು ಆಡಳಿತಾತ್ಮಕ ಮತ್ತು ತಾಂತ್ರಿಕ ಅನುಮೋದನೆಯನ್ನು ನೀಡಲು ಸ್ಥಾಯಿ ಸಮಿತಿಯ ಮುಂದೆ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರ ದಿನಾಂಕ: 06.02.2013ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

Office of the I T Advisor
No. 1144
Date. 15/3/13
Bruhat Bangalore Mahanagara Palike

**ವಿಷಯ ಸಂಖ್ಯೆ:ಶಿ.ಸ್ಥಾ.ಸ/21/12-13**

**ವಿಷಯ: 2011-12ನೇ ಸಾಲಿನ ಮಾನ್ಯ ಉಪಮಹಾಪೌರರ ವಿವೇಚನಾ ಅಧೀನಕ್ಕೆ ಒಳಪಟ್ಟ "ಮರಳಿ ಬಾ ಆಟದ ಮೈದಾನಕ್ಕೆ" ಅನುದಾನದಡಿಯಲ್ಲಿ ಅನುಮೋದನೆಯಾದ ವಾರ್ಡ್ ನಂ: 8 ರಲ್ಲಿ ಟಾಟಾನಗರದ ಆಟದ ಮೈದಾನವನ್ನು ಅಭಿವೃದ್ಧಿಪಡಿಸುವ ಬಗ್ಗೆ.**

ವಿಶೇಷ ಆಯುಕ್ತರು(ಯೋಜನೆ)ರವರ ಟಿಪ್ಪಣಿ ಸಂಖ್ಯೆ:ಬಿಬಿಎಂಪಿ:ಜಂ.ಆ(ಯವ)ಪಿಆರ್/6609/12-13, ದಿನಾಂಕ: 06.02.2013ರಂದು ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ಯಲಹಂಕ ವಲಯದ ವಾರ್ಡ್ ಸಂಖ್ಯೆ: 8 ರ ಕೋಡಿಗೇಹಳ್ಳಿ ವ್ಯಾಪ್ತಿಯಲ್ಲಿ ಬರುವ ಟಾಟಾನಗರದಲ್ಲಿರುವ ಮಕ್ಕಳ ಆಟದ ಮೈದಾನವು ಗಿಡಪೊದೆಗಳಿಂದ ಹಾಗೂ ವಿಷಜಂತುಗಳಿಂದ ತುಂಬಿಕೊಂಡಿದ್ದು, ಸಾರ್ವಜನಿಕರ ಮತ್ತು ಮಕ್ಕಳು ಓಡಾಡುವ ಸಮಯದಲ್ಲಿ ಪ್ರಾಣಾಪಾಯವಾಗುವ ಸಾಧ್ಯತೆ ಇದ್ದು

ಮೈದಾನಕ್ಕೆ" ಅನುದಾನದಡಿಯಲ್ಲಿ ಅನುಮೋದನೆಯಾಗಿರುತ್ತದೆ.

ಸದರಿ ಕಾಮಗಾರಿ ಸಂಕೇತ 008-12-000077 ಇದ್ದು, ಸದರಿ ಕಾಮಗಾರಿಯನ್ನು ಮೆ: ಕೆ.ಆರ್.ಐ.ಡಿ.ಎಲ್ ಸಂಸ್ಥೆಗೆ ವಹಿಸಲು ಆಡಳಿತಾತ್ಮಕ ಮತ್ತು ತಾಂತ್ರಿಕ ಅನುಮೋದನೆಯನ್ನು ನೀಡಲು ಸ್ಥಾಯಿ ಸಮಿತಿಯ ಮುಂದೆ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**ನಿರ್ಣಯ:ವಿಶೇಷ ಆಯುಕ್ತರು (ಯೋಜನೆ)ರವರ 06.02.2013ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

**ವಿಷಯ ಸಂಖ್ಯೆ:ಶಿ.ಸ್ಥಾ.ಸ/22/12-13**

**ವಿಷಯ: ವಾರ್ಡ್ ನಂ-72, ಹೇರೋಹಳ್ಳಿ ವ್ಯಾಪ್ತಿಯಲ್ಲಿ ಪ್ರಾರಂಭಿಸಿರುವ ಶಿಶುವಿಹಾರಗಳಿಗೆ ಬಾಡಿಗೆ ನಿಗದಿಪಡಿಸಿ ಪಾವತಿಸುವ ಬಗ್ಗೆ.**

**ಉಲ್ಲೇಖ: ನಗರ ಪಾಲಿಕೆ ಸದಸ್ಯರು ನಂ:72 ರವರ ಪತ್ರದ ದಿನಾಂಕ: 14.09.2012.**

ವಿಶೇಷ ಆಯುಕ್ತರವರ ಟಿಪ್ಪಣಿಯ, ದಿನಾಂಕ: 22.02.2013ರಲ್ಲಿ ವಿವರಿಸಿರುವಂತೆ, ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಾರ್ಡ್ ನಂ:72, ಹೇರೋಹಳ್ಳಿ ವ್ಯಾಪ್ತಿಯಲ್ಲಿನ 1) ತುಂಗಾನಗರ 2) ಕೆಂಪೇಗೌಡನಗರ 3) ವಿಘ್ನೇಶ್ವರನಗರ 4) ಮಹದೇಶ್ವರನಗರ 5) ಮುನೇಶ್ವರನಗರ ಮತ್ತು 6) ಪ್ರಸನ್ನ ಬಡಾವಣೆಗಳಲ್ಲಿ ಶಿಶುವಿಹಾರಗಳನ್ನು ಪ್ರಾರಂಭಿಸಲು ಮಾನ್ಯ ಆಯುಕ್ತರ ಅನುಮೋದನೆಯಂತೆ ಮೇಲ್ಕಂಡ ಪ್ರದೇಶಗಳಲ್ಲಿ ಶಿಶುವಿಹಾರಗಳನ್ನು ಪ್ರಾರಂಭಿಸಲಾಗಿರುತ್ತದೆ.

ಮುಂದುವರೆದಂತೆ, ಮೇಲ್ಕಂಡ ಪ್ರದೇಶಗಳಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಟ್ಟಡಗಳು ಇಲ್ಲದ ಕಾರಣ ಖಾಸಗಿ ಕಟ್ಟಡಗಳನ್ನು ಬಾಡಿಗೆಗೆ ಪಡೆದು ಸುಮಾರು 12 ತಿಂಗಳುಗಳಿಂದ ಶಿಶುವಿಹಾರಗಳನ್ನು ನಡೆಸಿಕೊಂಡು ಬರುತ್ತಿದ್ದು, ಸದರಿ ಕಟ್ಟಡದ ಮಾಲೀಕರುಗಳಿಗೆ, ಈವರೆಗೂ ಬಾಡಿಗೆ ಪಾವತಿ ಮಾಡಿರುವುದಿಲ್ಲ. ಈ ಬಗ್ಗೆ ಕಟ್ಟಡದ ಮಾಲೀಕರುಗಳು ಹಾಗೂ ನಗರ ಪಾಲಿಕೆ ಸದಸ್ಯರು ಅತೀ ಜರೂರಾಗಿ ಬಾಡಿಗೆಯನ್ನು ಪಾವತಿಸಲು ಕೋರಿರುತ್ತಾರೆ. ಆದ್ದರಿಂದ, 2012-13ನೇ ಸಾಲಿನ ಆಯ-ವ್ಯಯ ಲೆಕ್ಕ ಶೀರ್ಷಿಕೆ ಪಿ-0256 (ಶಿಕ್ಷಣ, ಶೈಕ್ಷಣಿಕ ಅಭಿವೃದ್ಧಿ ಚಟುವಟಿಕೆಗಳು, ಹಿರಿಯ ಕಾಲೇಜು ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕಗಳು ಮತ್ತು ಅಧ್ಯಯನ ಪುಸ್ತಕಗಳು)ರಡಿ ರೂ.12,73,766/-ಗಳಲ್ಲಿ ಸದರಿ ಕಟ್ಟಡದ ಮಾಲೀಕರುಗಳಿಗೆ ಬಾಡಿಗೆ ನಿಗಡಿಪಡಿಸಲು ಹಾಗೂ ಈ ಹಿಂದಿನ 12 ತಿಂಗಳ ಬಾಡಿಗೆ ಮೊತ್ತ ರೂ.3,84,000/-ಗಳನ್ನು ಪಾವತಿಸಲು ಅನುಮೋದನೆಗಾಗಿ ಸ್ಥಾಯಿ ಸಮಿತಿಗೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರ ದಿ: 22.2.2013ರ ಟಿಪ್ಪಣಿಯನ್ನು ಒಪ್ಪುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆ ಪಡೆಯಲು ಸಮಿತಿಯು ತೀರ್ಮಾನಿಸಿತು.**

ಬಿ.ಗೋವಿಂದರಾಜು,
ಅಧ್ಯಕ್ಷರು,
ಶಿಕ್ಷಣ ಸ್ಥಾಯಿ ಸಮಿತಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,

ಪ್ರತಿಯನ್ನು:

1) ಮಹಾ ಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
2) ಉಪ ಮಹಾಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
3) ಆಡಳಿತ ಪಕ್ಷ/ವಿರೋಧ ಪಕ್ಷ ಹಾಗೂ ಜೆ.ಡಿ.ಎಸ್. ಪಕ್ಷದ ನಾಯಕರುಗಳಿಗೆ ಮಾಹಿತಿಗಾಗಿ ಕಳುಹಿಸಿದೆ.
4) ಆಯುಕ್ತರವರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಆಯುಕ್ತರವರ ಅವಗಾಹನೆಗೆ ತರಲು ಕೋರಿದೆ.
5) ಅಪರ ಆಯುಕ್ತರು(ಯೋಜನೆ) ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
6) ಜಂಟಿ ಆಯುಕ್ತರು (ಕಲ್ಯಾಣ)ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
7) ಶಿಕ್ಷಣಾಧಿಕಾರಿ/ಕ್ರೀಡಾಧಿಕಾರಿ ಮತ್ತು ದೈಹಿಕ ಶಿಕ್ಷಣಾಧಿಕಾರಿ ರವರುಗಳಿಗೆ ಮಾಹಿತಿಗಾಗಿ ಕಳುಹಿಸಿದೆ.
8) ಮಾಹಿತಿ ತಂತ್ರಜ್ಞಾನ ಸಲಹೆಗಾರರಿಗೆ ಕಳುಹಿಸುತ್ತಾ, ಅಂತರ್ಜಾಲದಲ್ಲಿ ಅಳವಡಿಸಲು ಸೂಕ್ತ ಕ್ರಮವಹಿಸುವಂತೆ ಸೂಚಿಸಿದೆ.
9) ಕಛೇರಿ ಕಡತಕ್ಕೆ.